# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ. ಹೆಚ್. ರಸ್ತೆ, ತುಮಕೂರು – 572 103

**ಸಂಖ್ಯೆ:ತು.ವಿ:ಖ.ಕೋ:01:2024-25/** 1553 **ದಿನಾಂಕ:02.07.2024**

## ದರಪಟ್ಟಿ ಆಹ್ವಾನ

**ವಿಷಯ: ವಿಶ್ವವಿದ್ಯಾನಿಲಯದ ಪ್ರಸಾರಾಂಗದ ಪ್ರಕಟಣೆಯಾದ ಲೋಕಜ್ಞಾನ ಸಂಪುಟ-11 ಸಂಚಿಕೆ-31ನ್ನು ಪುಸ್ತಕದ ರೂಪದಲ್ಲಿ ಮುದ್ರಿಸಿ ಸರಬರಾಜು ಪಡೆಯಲು ದರಪಟ್ಟಿಗಳನ್ನು ಆಹ್ವಾನಿಸಿರುವ ಕುರಿತು.**

**ಉಲ್ಲೇಖ:** 1. ನಿರ್ದೇಶಕರು, ಪ್ರಸಾರಾಂಗ, ತು.ವಿ.ತು ಇವರ ಪತ್ರ ದಿನಾಂಕ: 07.05.2024.
2. ವಿ.ವಿ ಅಧಿಸೂಚನೆ ಪತ್ರದ ಸಂಖ್ಯೆ: ತುವಿತು:ಕೆ.ಟಿ.ಪಿ.ಪಿ/ತಿ.ಪ/ಖ.ಕೋ/2022-23/9035 ದಿನಾಂಕ: 09.09.2022.
3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 28.06.2024.

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (01)ರ ಮನವಿ ಮೇರೆಗೆ ಲೋಕಜ್ಞಾನ ಸಂಪುಟ-11 ಸಂಚಿಕೆ-31ನ್ನು ಪುಸ್ತಕ ರೂಪದಲ್ಲಿ ಮುದ್ರಿಸಬೇಕಾಗಿದೆ. ಈ ಸಂಬಂಧ ಉಲ್ಲೇಖ (02)ರ ವಿಶ್ವವಿದ್ಯಾನಿಲಯದ ಆದೇಶದಂತೆ ಕೆಳಕಂಡ ಕೋಷ್ಟಕದಲ್ಲಿ ತಿಳಿಸಿರುವಂತೆ ಷರತ್ತುಗಳಿಗೊಳಪಟ್ಟು ಉಲ್ಲೇಖ (03)ರ ಅನುಮೋದನೆ ಮೇರೆಗೆ ಮುದ್ರಣಕ್ಕೆ ಆಸಕ್ತ ನೊಂದಾಯಿತ ಬಿಡ್ಡುದಾರರಿಂದ ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ.

| ಕ್ರ ಸಂ. | ಪುಸ್ತಕದ ಹೆಸರು | ಪ್ರಮಾಣ | ಮಾನದಂಡಗಳು | ಪುಸ್ತಕದ ಕನಿಷ್ಠ ಅಂದಾಜು ಪುಟಗಳು | ಮುದ್ರಣದ ದರ ರೂ. (ಒಂದು ಪ್ರತಿಗೆ, ಎಲ್ಲಾ ತೆರಿಗೆಗಳು ಸೇರಿದಂತೆ) |
|---|---|---|---|---|---|
| 01 | **ಲೋಕಜ್ಞಾನ ಸಂಪುಟ-11** | 100 ಪ್ರತಿಗಳು | 1. NS ಮ್ಯಾಪ್ ಲಿಥೋ ಪೇಪರ್ 80 GSM<br>2. ಸೈಜ್: 20 ಸೆ.ಮೀ ಅಗಲ ಮತ್ತು 27ಸೆಮೀ ಉದ್ದ (Economic and Political Weekly-EPW ಪತ್ರಿಕೆಯ ಅಳತೆಯ ಮಾದರಿ)<br>3. 350 GSM ಆರ್ಟ್ ಕಾರ್ಡ್<br>4. ಮಲ್ಟಿ ಕಲರ್, ಮ್ಯಾಟ್‌ಫಿನಿಷ್ ಲ್ಯಾಮಿನೇಷನ್<br>5. ಸೆಕ್ಷನ್+ ಸ್ಟಿಚ್ಡ್ ಬೈಂಡಿಂಗ್<br>6. ಪುಟ ವಿನ್ಯಾಸ ಮುದ್ರಕರದೇ (ಪ್ರಸಾರಾಂಗ ನಿರ್ದೇಶಕರ ಸೂಚನೆಗನುಸಾರವಾಗಿ)<br>7. ಸಾಗಾಟವೆಚ್ಚವೂ ಮುದ್ರಕರದೇ ಆಗಿರುತ್ತದೆ. | 200 | |

**ಷರತ್ತು ಮತ್ತು ನಿಬಂದನೆಗಳು:**

1. ಲಕೋಟೆಯ ಮೇಲೆ **"ಲೋಕಜ್ಞಾನ ಸಂಪುಟ-11 ಸಂಚಿಕೆ-31ನ್ನು ಸರಬರಾಜು ಮಾಡಲು ದರಪಟ್ಟಿ"** ಎಂದು ಸ್ಪಷ್ಟವಾಗಿ ನಮೂದಿಸತಕ್ಕದ್ದು.
2. **ಪುಟಗಳ ಸಂಖ್ಯೆ ವ್ಯತ್ಯಾಸವಾದಲ್ಲಿ ಅದಕ್ಕನುಗುಣವಾಗಿ ವೆಚ್ಚದಲ್ಲೂ ವ್ಯತ್ಯಾಸವಾಗುವುದರಿಂದ ಮುಖ ಪುಟಕ್ಕೆ ಎಷ್ಟು ಬೆಲೆ ಮತ್ತು ಒಳಪುಟಗಳಿಗೆ ಎಷ್ಟು ಬೆಲೆ ಎಂದು ಪ್ರತ್ಯ-ಪ್ರತ್ಯೇಕವಾಗಿ ದರವನ್ನು ನಮೂದಿಸತಕ್ಕದ್ದು.**
3. ವಿಶ್ವವಿದ್ಯಾನಿಲಯಗಳ ವಿದ್ವತ್ ಪತ್ರಿಕೆ(ಜರ್ನಲ್)ಗಳನ್ನು ಪ್ರಕಟಿಸಿ ಅನುಭವ ಇರುವವರನ್ನು ಆದ್ಯತೆಯ ಮೇರೆಗೆ ಪರಿಗಣಿಸಲಾಗುವುದು.
4. ದರಪಟ್ಟಿಯನ್ನು ಸಲ್ಲಿಸಲು ಕೊನೆಯ **ದಿನಾಂಕ: 30.07.2024. ಅಪರಾಹ್ನ 3.00** ಗಂಟೆ.
5. ದರಪಟ್ಟಿಗಳನ್ನು **ಮಾನ್ಯ ಕುಲಸಚಿವರು, ವಿಶ್ವವಿದ್ಯಾನಿಲಯ ಕಾರ್ಯಾಲಯ, ತುಮಕೂರು ವಿಶ್ವವಿದ್ಯಾನಿಲಯ, ಬಿ.ಹೆಚ್. ರಸ್ತೆ, ತುಮಕೂರು-572103** ಇವರಿಗೆ ಮುದ್ದಾಂ ಅಥವಾ ಅಂಚೆಯ ಮೂಲಕ ತಲುಪಿಸಬಹುದು. ಅಂಚೆಯ ವಿಳಂಬಕ್ಕೆ ಅಥವಾ ಅಂಚೆಯು ತಲುಪದಿದ್ದಲ್ಲಿ ವಿಶ್ವವಿದ್ಯಾನಿಲಯವು ಜವಾಬ್ದಾರರಲ್ಲ.
6. ದರಪಟ್ಟಿಗಳನ್ನು ಯಾವುದೇ ಕಾರಣ ನೀಡದೆ ಅಂಗೀಕರಿಸುವ ಅಥವಾ ತಿರಸ್ಕರಿಸುವ ಪೂರ್ಣ ಹಕ್ಕನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿದೆ.
7. ದರಪಟ್ಟಿ ಸಲ್ಲಿಸುವ ಸಂಸ್ಥೆಯವರು ತಮ್ಮ ಸಂಸ್ಥೆಯ GSTIN No. ಮತ್ತು PAN No. ದಾಖಲೆಗಳನ್ನು ದರಪಟ್ಟಿಯ ಜೊತೆಗೆ ಲಗತ್ತಿಸತಕ್ಕದ್ದು.
8. ವಿಶ್ವವಿದ್ಯಾನಿಲಯವು ಸೂಚಿಸುವ ಸ್ಥಳಕ್ಕೆ ಮುದ್ರಣ ಮಾಡಿದ ಪುಸ್ತಕಗಳನ್ನು ಸರಬರಾಜು ಮಾಡುವುದು ಮತ್ತು ಸಾರಿಗೆ ವೆಚ್ಚವನ್ನು (ತಗಲುವ ಕಾರ್ಮಿಕರ ವೆಚ್ಚ) ಸರಬರಾಜುದಾರರೇ ಭರಿಸತಕ್ಕದ್ದು.

9. ದರಪಟ್ಟಿಯಲ್ಲಿ ನಮೂದಿಸುವ ದರಗಳು ತೆರಿಗೆ, ಸಾಗಾಣಿಕಾ ವೆಚ್ಚ ಮತ್ತು ಇತರೆ ಸೇವೆಯ ಮೊತ್ತವನ್ನು ಒಳಗೊಂಡಿರತಕ್ಕದ್ದು.
10. ದರಪಟ್ಟಿಯಲ್ಲಿ ನಮೂದಿಸಿರುವ ಮುದ್ರಣದ ಪ್ರಮಾಣವನ್ನು ಹೆಚ್ಚಿಸುವ ಅಥವಾ ಕಡಿಮೆಗೊಳಿಸುವ ಹಕ್ಕನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿರುತ್ತದೆ.
11. ಪ್ರತಿ ಸಂಸ್ಥೆಯವರು ಏಕೈಕ ದರಪಟ್ಟಿಯನ್ನು ಮಾತ್ರ ಸಲ್ಲಿಸತಕ್ಕದ್ದು.
12. ಸರಬರಾಜು ಆದೇಶದಲ್ಲಿ ನೀಡುವ ಎಲ್ಲಾ ಷರತ್ತುಗಳನ್ನು ಪಾಲಿಸಬೇಕು.
13. ಹೆಚ್ಚಿನ ವಿವರಗಳು ಅಥವಾ ಮಾಹಿತಿಯು ಅಗತ್ಯವಿದ್ದಲ್ಲಿ **ಕುಲಸಚಿವರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು** ಇವರನ್ನು ಸಂಪರ್ಕಿಸಬಹುದು.

ಕುಲಸಚಿವರು

**ಕುಲಸಚಿವರು**
**ತುಮಕೂರು ವಿಶ್ವವಿದ್ಯಾನಿಲಯ**
ತುಮಕೂರು

**ಪ್ರತಿಗಳು:**

1. ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ನಿರ್ದೇಶಕರು, ಪ್ರಸಾರಾಂಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.(ಇಂದೇ ವೆಬ್‌ಸೈಟ್‌ನಲ್ಲಿ ಪ್ರಕಟಿಸತಕ್ಕದ್ದು.)
4. ಕಛೇರಿ ಪ್ರತಿ.